

ಸವಿತಾ: ನಿಮ್ಮ ಅತ್ತೆ ಎಲ್ಲಾ ವಿಷಯಕ್ಕೂ ತುಂಬಾ ಕಿರಿ ಕಿರಿ ಮಾಡ್ತಾರೆ ಅಂತಿದ್ಯಲ್ಲಾ, ಈಗ ಹೇಗಿದ್ದಾರೆ?

ವಿನಿತಾ: ಈಗ ಎಲ್ಲಾ ಸರಿ ಹೋಗಿದೆ, ಅವರೀಗ ನನ್ನತ್ತ ತಲೆ ಕೂಡಾ ಎತ್ತದ ಹಾಗೆ ಮಾಡ್ಬಿಟ್ಟೆ.

ಸವಿತಾ: ಹೌದಾ, ಅಂಥಾದ್ದೇನು ಮಾಡಿದೆ?

ವಿನಿತಾ: ಒಂದು ಮೊಬೈಲ್ ತೆಗೆಸಿಕೊಟ್ಟು ಫೇಸ್ ಬುಕ್, ವಾಟ್ಸಪ್ ಬಳಸೋದು ಹೇಳಿ ಕೊಟ್ಟೆ. ಈಗ ಬೆಳಿಗ್ಗೆಯಿಂದ ರಾತ್ರಿ ತನಕ ಮೊಬೈಲ್‌ನಲ್ಲೇ ಮುಳುಗಿ ಯಾರ ಕಡೆಗೂ ತಲೆ ಎತ್ತಿ ನೋಡೋದಿಲ್ಲ!

★★★

ಮಗಳು: ಅಮ್ಮಾ, ಅಡುಗೆಯಲ್ಲಿ ನಿನಗೆ ಸಹಾಯ ಮಾಡಲೇ...?

ಅಮ್ಮ: ಸರಿ ಮಗಳೇ, ಬಾ... ಆದರೆ ನೆಟ್ ಪ್ಯಾಕ್‌ಗೆ ಹಣ ಮಾತ್ರ ಸಿಗುವುದಿಲ್ಲ...!

★★★

ಟೀಚರ್: ಯಾಕೋ ಗೋಪಿ, ಇವತ್ತು ಅರ್ಧ ಪ್ಯಾಂಟ್ ಹಾಕ್ಕೊಂಡು ಬಂದಿದ್ದೀಯಾ?

ಗೋಪಿ: ಇವತ್ತು ಶನಿವಾರ, ಅರ್ಧ ದಿನ ಶಾಲೆ ಅಲ್ವಾ... ಅದಕ್ಕೇ ಮೇಡಂ, ಪೂರ್ತಿ ದಿನ ಇರುವಾಗ ಫುಲ್ ಪ್ಯಾಂಟ್ ಧರಿಸುತ್ತೇನೆ.

ಟೀಚರ್: ಹಾಗಾದರೆ ದಯವಿಟ್ಟು ಭಾನುವಾರ ತಪ್ಪಿಯೂ ಶಾಲೆಕಡೆ ಬರಬೇಡ ಕಣೋ...!

★★★

ಗುಂಡ ತನ್ನ ಬ್ಯಾಂಕಿಗೊಂದು ಪತ್ರ ಬರೆದ; 'ಸಾಕಷ್ಟು ಹಣವಿಲ್ಲವೆಂಬ ಕಾರಣಕ್ಕಾಗಿ ನನ್ನ ಚೆಕ್ ಹಿಂತಿರುಗಿಸಲಾಗಿದೆ; ಹಣ ನನ್ನ ಖಾತೆಯಲ್ಲಿಲ್ಲವೆ ಅಥವಾ ಬ್ಯಾಂಕಿನಲ್ಲಿಲ್ಲವೆ ಎಂದು ನನಗೆ ತಿಳಿಯಬೇಕಾಗಿದೆ...!'

★★★

ಮಗ: ಅಮ್ಮಾ, ನಿನ್ನೆ ನನಗೊಂದು ಕನಸು ಬಿದ್ದಿತ್ತು...

ಅಮ್ಮ: ಏನದು?

ಮಗ: ಕನಸಲ್ಲಿ ನನ್ನ ಒಂದು ಕಾಲು ಆಕಾಶದಲ್ಲಿತ್ತು, ಇನ್ನೊಂದು ಭೂಮಿ ಮೇಲಿತ್ತು.

ಅಮ್ಮ: ಈ ಥರಾ ಕನಸು ಕಾಣ್ಬೇಡ ಮಗನೇ... ಇದ್ದ ಒಂದು ಚಡ್ಡೀನೂ ಹರಿದು ಹೋಗುತ್ತೆ...!

(ಸಂಗ್ರಹ) **ರಮಣ್ ಶೆಟ್ಟಿ ರೆಂಜಾಳ್, ಮಹಾರಾಷ್ಟ್ರ**

### ಅಸೂಯೆ

ಒಬ್ಬಾತ ಪೊಲೀಸ್ ಠಾಣೆಗೆ ಬಂದು ತನ್ನ ಎದುರು ಮನೆಯವನ ಹೆಂಡತಿ ಕಳೆದುಹೋಗಿದ್ದಾಳೆ, ಬೇಗ ಹುಡುಕಿ ಕೊಡಿ ಎಂದು ದೂರು ನೀಡಿದ.

ಪೊಲೀಸ್ ಕೇಳಿದ 'ಅವನ ಹೆಂಡತಿ ಕಳೆದುಹೋಗಿದ್ದಕ್ಕೆ ನೀನ್ಯಾಕೆ ದೂರು ನೀಡ್ತಿದೀಯಾ?'

ಅದಕ್ಕೆ ದೂರು ಕೊಟ್ಟವ ಹೇಳಿದ. 'ಅಯ್ಯೋ, ಅವನ ಸಂತೋಷಾನ ನೋಡಿ ನನಗೆ ತಡ್ಕೊಳೋಕೆ ಆಗ್ತಿಲ್ಲಾ. ಅವಳು ಹೋದಾಗಿನಿಂದ ದಿನಾ ಪಾರ್ಟಿ ಮಾಡ್ತಿದಾನೆ ಅವನು!

★★★

### ತೂಕಕ್ಕೆ ತಕ್ಕ ಎತ್ತರ

ತನ್ನ ಬಳಿ ಬಂದ ತರುಣಿಗೆ ಡಯೆಟೀಷಿಯನ್ ಹೇಳ್ತಾ ಇದ್ಲು: 'ನೀವು ಹತ್ತು ಕೇಜಿನಾದ್ರೂ ತೂಕ ಕಮ್ಮಿ ಮಾಡ್ಕೊಳ್ಳೇಬೇಕು. ನಿಮ್ಮ ಎತ್ತರಕ್ಕೆ ನಿಮ್ಮ ತೂಕ ಜಾಸ್ತಿ ಆಯಿತು.'

ತರುಣಿ: ಅಯ್ಯೋ ನನಗೆ ನನ್ನ ತೂಕಕ್ಕಿಂತ ಎತ್ತರದ್ದೇ ಯೋಚನೆ.

ಡಯೆಟೀಷಿಯನ್: ಅದು ಹೇಗೆ?

ತರುಣಿ: ನನ್ನ ತೂಕದ ಪ್ರಕಾರ ನನ್ನ ಎತ್ತರ ಏಳು ಅಡಿಯಾದರೂ ಇರ್ಬೇಕಿತ್ತು. ಆದರೆ ನಾನಿರೋದು ಐದೂ ಕಾಲು ಅಡಿ ಮಾತ್ರ!

★★★

### ವೈರಸ್‌ಗೆ ಊಲ್ ಮಾಡಿದ್ದು

ಡಾಕ್ಟರ್: ಅಲ್ವೋ, ನಾನು ಒಂಬತ್ತು ಘಂಟೆಗೆ ತಗೋ ಅಂತ ಮಾತ್ರೆ ಕೊಟ್ಟರೆ ಆರು ಘಂಟೆಗೆ ಯಾಕೋ ತಗೊಂಡೆ?

'ಆ ವೈರಸ್‌ಗಳಿಗೆ ಸರ್‌ಪ್ರೈಜ್ ಕೊಟ್ಟು ಫೂಲ್ ಮಾಡೋಣಾಂತ ಡಾಕ್ಟ್ರೆ' ಗುಂಡನ ಉತ್ತರ ಸಿದ್ಧವಾಗಿತ್ತು!

★★★

### ಕ್ಲಾಸ್‌ಮೇಟಾ... ಟೀಚರ್ರಾ...?

ತನ್ನ ಸೌಂದರ್ಯ ಮತ್ತು ಯೌವ್ವನದ ಬಗ್ಗೆ ವಿಪರೀತ ಹೆಮ್ಮೆಯಿದ್ದ ಸುಂದರಿ ಹಲ್ಲು ತೋರಿಸಲು ಒಬ್ಬ ಡೆಂಟಿಸ್ಟ್ ಬಳಿ ಹೋಗಿದ್ದಳು. ಅವನ ಹೆಸರನ್ನು ನೋಡಿದಾಗ, ಇದೇ ಹೆಸರಿನ ಒಬ್ಬ ಸುಂದರ ಹುಡುಗ ತನ್ನ ಜತೆ ಓದುತ್ತಿದ್ದುದನ್ನು ನೆನಪಿಸಿಕೊಂಡಳು. ಒಳಗೆ ಹೋಗಿ ಆತನನ್ನು ನೋಡಿದಾಗ, ಈ ಬಿಳಿಕೂದಲ ಬಾಲ್ಡಿ ನನ್ನ ಜತೆಯವನು ಹೇಗಾದಾನು ಎಂದುಕೊಳ್ಳುತ್ತಾ, ಸ್ವಲ್ಪ ಅಸಡ್ಡೆಯಿಂದಲೇ ಅವನನ್ನು ವಿಚಾರಿಸಿದಳು 'ನೀವು 1988 ರಲ್ಲಿ ಕಾಲೇಜಿನಲ್ಲಿ ಫಸ್ಟ್ ಪಿಯುಸಿ ಓದುತ್ತಿದ್ದಿರಾ?' ಆತ 'ಹೌದು' ಎಂದುತ್ತರಿಸಿದ.

ಈಕೆ : ಓಹ್, ಹಾಗಿದ್ದರೆ ನೀವು ನನ್ನ ಕ್ಲಾಸ್‌ನಲ್ಲಿದ್ದಿರಿ.

ಆತ ಕೂಲಾಗಿ ಕೇಳಿದ 'ಹೌದಾ ಮೇಡಂ, ನೀವು ಯಾವ ಸಬ್ಜೆಕ್ಟ್ ತಗೋತಿದ್ರೀ?'

(ಸಂಗ್ರಹ) **ಬಿ.ಎಸ್. ರಾಜಲಕ್ಷ್ಮಿ . ಹಾಸನ**